# ಸ್ವಾಮಿ ರಂಗನಾಥಾನಂದಜಿಯವರೊಂದಿಗೆ ಮಾತುಕತೆ

**ಸ್ವಾಮಿ ರಂಗನಾಥಾನಂದಜಿಯವರ ಬದುಕು ಒಂದು ತೆರೆದ ಪುಸ್ತಕದಂತಿತ್ತು. ಅವರಲ್ಲಿ ಎದ್ದು ಕಾಣುತ್ತಿದ್ದ ಒಂದು ವಿಶೇಷ ಗುಣವೆಂದರೆ ಸರಳತೆ ಮತ್ತು ಸುಲಭ ಸಾಮೀಪ್ಯ. ಇಬ್ಬರು ವಿದ್ಯಾರ್ಥಿಗಳು ಅವರೊಡನೆ ನಡೆಸಿದ ಅನೌಪಚಾರಿಕ ಮಾತುಕತೆಗಳ ಒಂದು ವಿವರವನ್ನು ಇಲ್ಲಿ ನೀಡುತ್ತಿದ್ದೇವೆ.**

**ವಿದ್ಯಾರ್ಥಿ : ಸ್ವಾಮೀಜಿ, ತಮ್ಮ ಬಾಲ್ಯ, ಹದಿಹರಯ ಹಾಗೂ ಯೌವನಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುವಿರಾ ?**

**ಸ್ವಾಮೀಜಿ** : ಮಗುವಾಗಿದ್ದಾಗ ನಾನು ತುಂಬ ಶಕ್ತಿಶಾಲಿಯಾಗಿರುವಂತೆ ಭಾವಿಸುತ್ತಿದ್ದೆ. ಬಾಲ್ಯದಲ್ಲಿ ನಾನು ತೋಟಗಾರಿಕೆ, ಈಜು ಇವುಗಳಲ್ಲಿ ತುಂಬಾ ಆಸಕ್ತನಾಗಿದ್ದೆ. ಈಗಲೂ ಕೂಡ ನಾನು ವೇಗದ ಈಜುಗಾರನೇ. ಅನಂತರ, ಕ್ರೀಡೆಗಳು. ಹೆಚ್ಚು ಅಧ್ಯಯನ ಮಾಡುತ್ತಿರಲಿಲ್ಲ. ೧೪ನೇ ವಯಸ್ಸಿನಲ್ಲಿ ವಿವೇಕಾನಂದ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡದ್ದು ಮಾತ್ರ ಇದಕ್ಕೆ ಹೊರತು.

**ವಿದ್ಯಾರ್ಥಿ : ನೀವು ಇತರ ಮಕ್ಕಳೊಂದಿಗೆ ಬೆರೆಯುತ್ತಿದ್ದಿರಾ? ಅವರೊಂದಿಗೆ ಆಟವಾಡುತ್ತಿದ್ದಿರಾ?**

**ಸ್ವಾಮೀಜಿ** : ಬಹಳ, ಬಹಳ ಆಡುತ್ತಿದ್ದೆ. ಆಟಕ್ಕೆ ಹುಡುಗರನ್ನು ಕಲೆ ಹಾಕುವುದರಲ್ಲಿ ನಾನು ಸಮರ್ಥನಾಗಿದ್ದೆ. ಅದೇ ರೀತಿ ಕೆಲಸದಲ್ಲೂ. ೧೯೧೭-೧೮ರ ಆ ಹಳೆಯ ದಿನಗಳಲ್ಲಿ ಭಾರೀ ಮಳೆಯಿಂದಾಗಿ ಹಳ್ಳಿಯ ರಸ್ತೆಯಲ್ಲೆಲ್ಲ ಕೆಸರು, ಕೊಚ್ಚೆ ತುಂಬಿಬಿಟ್ಟಿತ್ತು. ನನ್ನ ವಯಸ್ಸಿನ ಹುಡುಗರನ್ನೆಲ್ಲ ಸೇರಿಸಿಕೊಂಡು ನಾನು ರಸ್ತೆ ದುರಸ್ತಿ ಮಾಡಲು ತೊಡಗಿದ್ದೆ. ಅಂಥ ಗುಂಪು ಚಟುವಟಿಕೆಗಳನ್ನು ಸಂಘಟಿಸುತ್ತಿದ್ದೆ ; ಅದರಲ್ಲಿ ನನಗೆ ವಿಶೇಷ ಒಲವು. ಅಂತೆಯೇ, ಕ್ರೀಡೆಗಳಲ್ಲೂ ನನಗೆ ಆಸಕ್ತಿಯಿತ್ತು.

**ವಿದ್ಯಾರ್ಥಿ :ಉಳಿದೆಡೆಗಳಿಗಿಂತ ರಾಮಕೃಷ್ಣ ಮಿಷನ್ ಸೇರಲು ನಿಮಗೆ ಪ್ರೇರಣೆ ದೊರೆತುದು ಹೇಗೆ ?**

**ಸ್ವಾಮೀಜಿ** : ನಿಮ್ಮೆಲ್ಲರಿಗಾಗಿ ಸ್ವಾಮಿ ವಿವೇಕಾನಂದರು ಬರೆದುದು, ಮಾತನಾಡಿದ್ದೆಲ್ಲ ಇದನ್ನೇ—"ಸಾಮಾನ್ಯ ಜನರ ಒಳಿತಿಗಾಗಿ ಒಬ್ಬನು ತನ್ನ ಒಂದು ಜೀವನವನ್ನೇಕೆ ಬಲಿಗೊಡಬಾರದು?" ಇದನ್ನು ಅವರು ಮತ್ತೆ ಮತ್ತೆ ಹೇಳುತ್ತಾರೆ. "ಲಕ್ಷಾಂತರ ಜನರು ಯುಗಯುಗಗಳಿಂದ ಹಸಿದು ಕಂಗೆಟ್ಟಿರುವಾಗ ಕೇವಲ ತಮಗೋಸ್ಕರ ಬದುಕುವುದರಿಂದ ಪ್ರಯೋಜನವೇನು? ಇದು ಮಹತ್ಕಾರ್ಯಗಳನ್ನು ಮಾಡಬೇಕಾಗಿರುವ ಕಾಲ." ಸ್ವಾಮಿ ವಿವೇಕಾನಂದರ ಉಪನ್ಯಾಸ ಮತ್ತು ಪತ್ರಗಳಲ್ಲಿ ಇಂಥ ವಿಚಾರಗಳು ವಿಪುಲವಾಗಿವೆ. ಅವುಗಳನ್ನು ಓದುವಾಗ, ನನಗೆ ಕಣ್ಣೀರು ಬಂದುಬಿಡುತ್ತಿತ್ತು—'ಇದೆಂಥ ಉನ್ನತ ಜೀವನ!' ಹೀಗೆ ನನ್ನ ಮನಸ್ಸಿನಲ್ಲಿ ವಿಚಾರ ಬೆಳೆಯಿತು; ಮೂರು ವರ್ಷಗಳಲ್ಲಿ ನನ್ನ ಜೀವನದ ಗುರಿ ಇದಾಗಬೇಕು ಎಂಬ ಆ ವಿಚಾರ ಖಚಿತವಾಗಿ ನನ್ನಲ್ಲಿ ನೆಲೆಗೊಂಡಿತು.

ಒಂದು ಸಲ (೧೯೩೭ರಲ್ಲಿ) ನಾನು ಆಂಧ್ರ ಪ್ರದೇಶದ ಮದನಪಲ್ಲಿ ಎಂಬ ಊರಿನಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದೆ. ಶ್ರೋತೃಗಳು ಯಾರೆಂದು ನನಗೆ ಗೊತ್ತಿರಲಿಲ್ಲ. ಅವರು ನನಗೆ ಈ ಪ್ರಶ್ನೆ ಹಾಕಿದರು—"ನೀವು ಸಂನ್ಯಾಸಿಯಾಗಲು ನಿಮಗೆ ಹೇಗೆ ಪ್ರೇರಣೆ ಬಂತು?" ನಾನು ಉತ್ತರಿಸಿದೆ "ನಾನು ವಿವೇಕಾನಂದರ ಉಪನ್ಯಾಸಗಳನ್ನು ಓದಿದಾಗ ಒಂದು ವಾಕ್ಯ ನನ್ನ ಮೇಲೆ ಅದ್ಭುತ ಪರಿಣಾಮ ಬೀರಿತು: 'ವಕೀಲರಾಗಬೇಕೆಂದು ಬಯಸುವುದು ಮತ್ತು ಆ ಮೂಲಕ ಜಗಳಗಳನ್ನು ಎತ್ತಿಕೊಳ್ಳುವುದಕ್ಕಿಂತಲೂ ಮುಖ್ಯವಾಗಿ, ಈ ದೇಶದಲ್ಲಿ ಮಾಡಲೇಬೇಕಾದ ಇನ್ನೂ ಉನ್ನತ ಕಾರ್ಯಗಳಿವೆ!'"

ಆಗ ಶ್ರೋತೃಗಳ ಕಡೆಯಿಂದ ಭಾರೀ ನಗುವಿನ ಅಬ್ಬರ ಕೇಳಿಬಂತು. ಕಾರಣ, ಅಲ್ಲಿದ್ದ ಬಹುಪಾಲು ಶ್ರೋತೃಗಳು ವಕೀಲರು. ಇಂಥ ಸಾಹಿತ್ಯ ಕೇವಲ ಪುಸ್ತಕವಲ್ಲ, ಇದೊಂದು ಸಂದೇಶ, ಅದರಲ್ಲಿ ವಿಶೇಷ ಶಕ್ತಿ ಅಡಗಿದೆ. ಪ್ರತಿಯೊಂದು ಪದವೂ ಶಕ್ತಿಯ ಆಗರ. ಇದು ಕೇವಲ ನನ್ನ ಅನುಭವವಷ್ಟೇ ಅಲ್ಲ, ಇತರ ಸಹಸ್ರಾರು ಮಂದಿಯದೂ ಕೂಡ. ಇಂದಿಗೂ ಕೂಡ ಅಂಥ ಶಕ್ತಿಸ್ಪರ್ಶವನ್ನು ಅನುಭವಿಸುವ ನೂರಾರು ಜನರಿದ್ದಾರೆ. ಅವರ ಸಾಧಾರಣ ಜೀವನವೇ ವಿದ್ಯುತ್ ಸ್ಪರ್ಶಕ್ಕೊಳಗಾಗುತ್ತದೆ. ನಿಮ್ಮ ಜೀವನದಲ್ಲಿ ಒಂದು ನಿಜವಾದ ಗುರಿ ಲಭಿಸುತ್ತದೆ. ಅದು ಉಪಯುಕ್ತ ಹಾಗೂ ಗೌರವಯುತವಾದದ್ದು; ಅದೊಂದು ಮಹತ್ಪ್ರೇರಣೆ.

**ವಿದ್ಯಾರ್ಥಿ : ರಾಮಕೃಷ್ಣ ಮಿಷನ್ನನ್ನು ಸೇರುವಾಗ ನಿಮ್ಮಲ್ಲಿ ಉಂಟಾದ ಮೊದಲ ಭಾವನೆಗಳೇನು?**

**ಸ್ವಾಮೀಜಿ** : ಇದು ನನ್ನ ಮನೆಯೆಂದು-ನಾನು ಸಂಪೂರ್ಣ ಇದಕ್ಕೆ ಸೇರಿದವನೆಂದು-ನಾನು ಭಾವಿಸಿದೆ. ಮನೆಯ ಕಡೆಯ ಸೆಳೆತವಿದ್ದೂ ಹೀಗೆ ನಾನು ಭಾವಿಸಿದೆ. ನನ್ನನ್ನು ಪ್ರೀತಿಸುವ ಹೆತ್ತವರು, ಸೋದರ-ಸೋದರಿಯರು, ಕೇರಳದ ಅತಿ ಸುಂದರವಾದ ಗ್ರಾಮೀಣ ಪರಿಸರ-ಎಲ್ಲವೂ ನನಗಿತ್ತು.

**ವಿದ್ಯಾರ್ಥಿ : ನಿಮ್ಮ ಜೀವನದ ಅತ್ಯಂತ ಕಷ್ಟಕರವಾದ ಕ್ಷಣಗಳು ಯಾವುವು ?**

**ಸ್ವಾಮೀಜಿ** : ಸಂಸ್ಥೆಗಳನ್ನು ನಡೆಸುವಾಗ ಅನೇಕ ಕಷ್ಟಗಳಿರುತ್ತವೆ. ಇದು ಹೀಗಿಲ್ಲದೆ ಬೇರೆ ರೀತಿ ಇರಬಹುದೆಂದು ನಾವು ನಿರೀಕ್ಷಿಸುವುದಿಲ್ಲ. ಕೆಲಸವೇ ಒಂದು ದೊಡ್ಡ ಸವಾಲು. ಎಂಥ ಸಾಮರ್ಥ್ಯವೇ ನಮ್ಮಲ್ಲಿರಲಿ, ನಾವು ಸಮರ್ಪಣಾಭಾವದಿಂದ

ಹಾಗೂ ಪ್ರಾರ್ಥನಾಭಾವದಿಂದ ಕೆಲಸ ಮಾಡಲು ಯತ್ನಿಸುತ್ತೇವೆ. ಅಲ್ಲಿ ತಪ್ಪುಗಳಿರುತ್ತಿದ್ದವು; ಆದರೆ ಬಹಳ ಗಂಭೀರವಾದ ತಪ್ಪುಗಳಲ್ಲ. ತಪ್ಪುಗಳೇ ಇಲ್ಲದ ಜೀವನವನ್ನು ನಾವು ನಿರೀಕ್ಷಿಸಲಾಗುವುದಿಲ್ಲ. ಸೋಲುಗಳನ್ನು ಲೆಕ್ಕಿಸಬಾರದು. ಜೀವನವೆಂಬ ಈ ರಣರಂಗದಲ್ಲಿ ತಪ್ಪುಗಳೆಂಬ ಧೂಳು ಎದ್ದೇಏಳುತ್ತದೆ. ಅವುಗಳನ್ನು ಸಹಿಸಲಾಗದ, ತೆಳ್ಳನೆಯ ಚರ್ಮದವರು ಮೊದಲು ಸ್ಥಾನಗಳಿಂದ ತೊಲಗಲಿ; ಇವು ಸ್ವಾಮಿ ವಿವೇಕಾನಂದರ ಮಾತುಗಳು. ನೀವು ಕೆಲಸ ಮಾಡುವಾಗ ತಪ್ಪುಗಳಾಗುತ್ತವೆ. ಈ ಕಾರಣದಿಂದ 'ನಾನು ಕೆಲಸವನ್ನೇ ಮಾಡಲಾರೆ' ಎಂಬ ಮನೋಭಾವ ಸರಿಯಲ್ಲ. ಅತ್ಯುತ್ತಮ ಉದ್ದೇಶದಿಂದ, ಒಳ್ಳೆಯ ಪ್ರೇರಣೆಯಿಂದ ಕೆಲಸ ಮಾಡಿ. ಎಂಥ ತಪ್ಪುಗಳೇ ಬರಲಿ, ತಿದ್ದಿಕೊಳ್ಳಿ.

**ವಿದ್ಯಾರ್ಥಿ : ಪ್ರತಿಯೊಬ್ಬ ಮನುಷ್ಯನಲ್ಲೂ ಕೆಲವೊಂದು ಕೊರತೆಗಳಿರುತ್ತವೆ ಎನ್ನುತ್ತಾರೆ. ಹಲವಾರು ವರ್ಷಗಳ ಕಠಿಣ ಶಿಸ್ತುಬದ್ಧ ಜೀವನದ ನಂತರ ನಿಮ್ಮಲ್ಲಿ ನಿಮಗೆ ಏನನ್ನು ಉತ್ತಮಪಡಿಸಿಕೊಳ್ಳಬೇಕು ಎಂದೆನಿಸುತ್ತದೆ?**

**ಸ್ವಾಮೀಜಿ :** ಇದೊಂದು ನಿರಂತರ ಪ್ರಕ್ರಿಯೆ. ಶ್ರೀರಾಮಕೃಷ್ಣರು ಈ ಬಗ್ಗೆ ಬಂಗಾಳಿಯಲ್ಲಿ ಹೇಳುತ್ತಾರೆ: **ಜತೋ ದಿನ್ ಬಾಚಿ, ತತೋ ದಿನ್ ಶಿಖಿ**–ಅಂದರೆ, ಎಲ್ಲಿಯತನಕ ಬದುಕಿರುತ್ತೇನೋ ಅಲ್ಲಿಯತನಕವೂ ನಾನು ಕಲಿಯುತ್ತೇನೆ. ಇದನ್ನು ನಾನು ಸಂಪೂರ್ಣ ಮೈಗೂಡಿಸಿಕೊಂಡಿದ್ದೇನೆ. ಹೀಗೆ ನಾವು ನಮ್ಮನ್ನು ಉತ್ತಮಪಡಿಸಿಕೊಳ್ಳಲು ಯತ್ನಿಸುತ್ತೇವೆ; ಇದು ಮಾನವನ ಬೆಳವಣಿಗೆಯ ಪರಿಕಲ್ಪನೆ. ಇದರಿಂದಲೇ ನಾವು ಬದುಕುತ್ತೇವೆ. ಪ್ರತಿಯೊಬ್ಬರೂ ಈ ವಿಚಾರವನ್ನು ಸ್ವೀಕರಿಸಬೇಕೆಂದು ನನ್ನ ಬಯಕೆ.

**ವಿದ್ಯಾರ್ಥಿ: ಪಾಶ್ಚಾತ್ಯರಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಧ್ಯಾತ್ಮಿಕ ಜೀವನದ ಬಗ್ಗೆ ಅದ್ಭುತ ಜಾಗೃತಿ, ಆಸಕ್ತಿ ಮೂಡುತ್ತಿದೆ. ಇದನ್ನು ನೀವು ಹೇಗೆ ವಿವರಿಸುತ್ತೀರಿ? ಇದು ನಿಜವಾದ ಆಸಕ್ತಿಯೇ, ಅಥವಾ ಮೂಡಿ ಮರೆಯಾಗುವಂಥದ್ದೆ ?**

**ಸ್ವಾಮೀಜಿ :** ಇದು ನಿಜವಾದುದು. ಬಹಳ ಸುಲಭವಾಗಿ ಇದನ್ನು ವಿವರಿಸಬಹುದು. ಮೂರು ಸಂಗತಿಗಳನ್ನು ನಾವು ತಿಳಿದುಕೊಳ್ಳಬೇಕು. ಭೋಗ, ಯೋಗ ಮತ್ತು ರೋಗ. ಭೋಗವೆಂದರೆ ಎಲ್ಲ ಬಗೆಯ ಇಂದ್ರಿಯ ಸುಖಗಳು, ದೈಹಿಕ ನೆಲೆಯ ಸಂತೃಪ್ತಿ. ಅನಂತರ ಯೋಗ, ಆಧ್ಯಾತ್ಮಿಕ ಅನ್ವೇಷಣೆ. ಭೋಗವಿಲ್ಲದೆ ಯೋಗ ಬರಲಾರದು. ಮೊದಲು ಭೋಗ. ಅದು ಪೂರ್ಣವಾದ ಬಳಿಕ ನಿಮಗೆ ಇವರೆಡರ ಆಯ್ಕೆಯಿದೆ–ಯೋಗ (ಆಧ್ಯಾತ್ಮಿಕ ಬೆಳವಣಿಗೆ) ಅಥವಾ ರೋಗ (ದೈಹಿಕ ಮತ್ತು ಮಾನಸಿಕ ಅನಾರೋಗ್ಯ). ಮಧ್ಯೆ ಯೋಗ ಬರದಿದ್ದಲ್ಲಿ ಭೋಗವು ರೋಗಕ್ಕೆ ದಾರಿ ಮಾಡಿಕೊಡುವುದು. ಅಂದರೆ, ಆಧ್ಯಾತ್ಮಿಕ ಬೆಳವಣಿಗೆ ಮಧ್ಯೆ ಪ್ರವೇಶಿಸದಿದ್ದರೆ ಇಂದ್ರಿಯ ಸುಖಾನುಭವಗಳು ಮಾನಸಿಕ ಹಾಗೂ ದೈಹಿಕ ರೋಗಗಳಿಗೆ ಕಾರಣವಾಗುವುವು.

ಇಂದು ಜಗತ್ತು ಭೋಗವನ್ನು ಕಂಡಿದೆ. ನನ್ನ ನಂಬಿಕೆಯ ಪ್ರಕಾರ ತುಸು ಯೋಗ ಆರಂಭವಾಗಿದೆ. ಹೌದು ತಾನೆ? ತಾವು ಇನ್ನೂ ಉತ್ತಮವಾದುದನ್ನು ಅರಸಬೇಕೆಂದು – ಅಂದರೆ ಆಧ್ಯಾತ್ಮಿಕ ಪ್ರಗತಿಯಾಗಬೇಕೆಂದು ಜನ ಬಯಸುತ್ತಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಭೋಗ ಸಮೃದ್ಧವಾಗಿದೆ, ಇಂದ್ರಿಯ ಸುಖ ಅಧಿಕವಾಗಿದೆ. ಆದ್ದರಿಂದ ಯೋಗ ಅಲ್ಲಿ ನಿಜವಾದ ಅನುಭವವಾಗಿದೆ. ಜನ ಅದನ್ನು ಬಯಸುತ್ತಿದ್ದಾರೆ. ಪಡೆಯಬಹುದಾದ ಆಕರ್ಷಕ ಸಂಗತಿಗಳು ಎಷ್ಟೋ ಇವೆ. ಯುವಕರು ಉನ್ನತ ವಿಷಯಗಳನ್ನು ಅರಸುತ್ತಿದ್ದಾರೆ: ಧ್ಯಾನ, ಪ್ರಾರ್ಥನೆ, ಭಕ್ತಿ, ಪ್ರಶ್ನೆ, ಅನ್ವೇಷಣೆ...

**ವಿದ್ಯಾರ್ಥಿ: ವಿಶ್ವವಿದ್ಯಾಲಯ ಶಿಕ್ಷಣ ಆಧ್ಯಾತ್ಮಿಕ ಮಾರ್ಗದಲ್ಲಿ ಒಂದು ಅಡಚಣೆಯೇ ಅಥವಾ ಅದಕ್ಕೆ ಸಹಾಯಕವಾದುದೆ ?**

**ಸ್ವಾಮೀಜಿ :** ಸಹಾಯಕವಾದುದೇ—ಆದರೆ ಸರಿಯಾದ ರೀತಿಯಲ್ಲಿ, ಅದಕ್ಕೆ ತಕ್ಕುದಾದ ಸ್ಥಾನದಲ್ಲಿ ಅದನ್ನಿರಿಸಿದರೆ ಮಾತ್ರ; ನೀವು ಸಾರ್ವಜನಿಕ ವಿದ್ಯಾಭ್ಯಾಸವನ್ನು ಕೊನೆಗೊಳಿಸುವಾಗ ನಾನು ಪಡೆದ ಜ್ಞಾನ ಇಷ್ಟು ಮಾತ್ರ; ನಾನು ಅರಿಯದ ಕ್ಷೇತ್ರಗಳು ಇನ್ನೂ ಇವೆ––ಎಂಬ ಅರಿವು ಇದ್ದರೆ ಉತ್ತಮ. ಆ ಕ್ಷೇತ್ರಗಳಲ್ಲಿ ಅನ್ವೇಷಣೆ ಮುಂದುವರಿಸಬೇಕು. ಆದರೆ ನಿಮ್ಮ ವಿದ್ಯಾಭ್ಯಾಸ ಆತ್ಮಸಂತೃಪ್ತಿಯೊಂದಿಗೆ ಕೊನೆಗೊಂಡು, ಅದಕ್ಕಿಂತ ಹೆಚ್ಚೇನೂ ಆಗದೆ, ಅದು ಕೇವಲ ಹಣ ಗಳಿಸಲು ಮಾತ್ರ ಎಂದಾದರೆ ಅದು ಏನೇನೂ ಸಾಲದು. ಇದು ನಮ್ಮ ಮನೋಭಾವವನ್ನು ಅವಲಂಬಿಸಿದೆ.

ಮೊದಲು ನಿಮಗೆ ಒಂದು ವಿಷಯದ ಅರಿವಿದೆ; ಅನಂತರ ಇನ್ನೊಂದು ವಿಷಯ ಹೊಸ ವಿವರಗಳೊಂದಿಗೆ ನಿಮ್ಮಲ್ಲಿ ತೆರೆದುಕೊಳ್ಳುವುದು—ಇದು ನಮಗೆಲ್ಲ ತಿಳಿದಿದೆ. ಈ ಮಟ್ಟಕ್ಕೇರಲು ಒಬ್ಬ ವ್ಯಕ್ತಿಗೆ ಸಾಧ್ಯವಾಗಬೇಕು. ಜ್ಞಾನ ಹಂತಹಂತವಾಗಿ ಭೌತಿಕದಿಂದ ಮಾನಸಿಕದ ಮೂಲಕ ಏರಿ ಆಧ್ಯಾತ್ಮಿಕದತ್ತ ಗಹನವಾಗುತ್ತ ಸಾಗುತ್ತದೆ. ಶರೀರವಿಜ್ಞಾನದ ಜ್ಞಾನ ಶ್ರೇಷ್ಠವಾದ ಜ್ಞಾನ; ನರವಿಜ್ಞಾನ ಅದಕ್ಕಿಂತ ಉತ್ತಮವಾದ ಜ್ಞಾನ; ಮನೋವಿಜ್ಞಾನ ಇನ್ನೂ ಆಳವಾದದ್ದು; ಕೊನೆಗೆ ಆತ್ಮಜ್ಞಾನವೇ ಎಲ್ಲಕ್ಕಿಂತಲೂ ಆಳವಾದುದು. ಒಂದು ಇನ್ನೊಂದರತ್ತ ಒಯ್ಯಬೇಕು. ನಾವು ದೈಹಿಕ ಹಂತದಲ್ಲೇ ನಿಂತುಬಿಡಬಾರದು.